ಶ್ರೀ ಕೆ.ಎಚ್.ರಂಗನಾಥ್:-ಅದು ಬಹಳ ಮಟ್ಟಿಗೆ ಆಗಬಹುದು ಎಂದು ಕಾಣುತ್ತದೆ. ಮುಖ್ಯಮಂತ್ರಿಗಳು ಬರುತ್ತಾರೆ.....

(ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದರು)

ಶ್ರೀ ಕೆ.ಎಚ್.ರಂಗನಾಥ್:-ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿರುವ ಹಾಗೆ, ಎರಡೂ ಸದನಗಳೂ ಬೆಳಿಗ್ಗೆ ಒಂಭತ್ತು ಗಂಟೆಯಿಂದ ಸೇರಿವೆ. ಆದ್ದರಿಂದ ಇದೆಲ್ಲಾ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:-ಈಗ ಆರು ಮಸೂದೆಗಳನ್ನು ಚರ್ಚೆ ಇಲ್ಲದೆ ಅವುಗಳಿಗೆ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ಶ್ರೀ ಕೆ.ಎಚ್.ರಂಗನಾಥ್:-ಈ ಬಿಲ್ ಆಗಿ ಬಿಡಲಿ....

ಶ್ರೀ ವಾಟಾಳ್ ನಾಗರಾಜ್:- ಹೇಳಿಕೆಯನ್ನು ಮೊದಲು ಕೊಡಿಸಿಬಿಡಿ. ನಾವು ರಾತ್ರಿ ಒಂದು ಗಂಟೆಯಾದರೂ ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಸಾಂಡ್ರಾ ವಿಚಾರದಲ್ಲಿ ಒಂದು ಮತ್ತು ಇನ್ನೊಂದು ಶ್ರೀ. ವಾಟಾಳ್ ನಾಗರಾಜ್ ಅವರು ಏನು ರೈಸ್ ಮಾಡಿದ್ದಾರೆ, ಅವರೆಡಕ್ಕೂ ಮೊದಲು ಉತ್ತರ ಕೊಡಿ.

ಶ್ರೀ ವಾಟಾಳ್ ನಾಗರಾಜ್:-ಜೀವನ ಭೀಮಾನಗರದಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ನಡೆದ ಘಟನೆ ಬಗ್ಗೆ, ಹೇಳಿಕೆಯನ್ನು ಕೊಟ್ಟುಬಿಡಿ ಸ್ವಾಮಿ.

ಮುಖ್ಯ ಮಂತ್ರಿಗಳ ಹೇಳಿಕೆ

ವಿಷಯ:-ಜೀವನ ಭೀಮಾನಗರ ಪೋಲೀಸ್ ಠಾಣೆಯಲ್ಲಿ ನಡೆದ ಘಟನೆ ಬಗ್ಗೆ:-

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯಮಂತ್ರಿ):-ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ಮತ್ತು ಅನೇಕ ಸ್ನೇಹಿತರು ಜೀವನಭೀಮಾನಗರದಲ್ಲಿ ನಡೆದ ಘಟನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮ ಜೊತೆ ಕೂಡ ಮಾತನಾಡಿದ್ದೇನೆ. ಅದರ ಬಗ್ಗೆ ನಾವು ವಿಚಾರ ಮಾಡಿದ್ದೇವೆ. ತಪ್ಪಿತಸ್ಥರು ಅಧಿಕಾರಿಗಳು ಅಥವಾ ಯಾರೇ ಇರಲಿ, ಅವರನ್ನು ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ಅದಕ್ಕೆ ನಾವು we are entrusting that case to COD. I am asking the COD, IGP to go within a week ಅಲ್ಲಿ ಹೋಗಿ ಅದನ್ನು ತನಿಖೆ ಮಾಡಿ ಬಂದು ನಮಗೆ ಒಂದು ವರದಿಯನ್ನು ಕೊಡಲಿ. The question is there was an alleged altercation between Ranganath and....

ತಾವು ಹೇಳಿದ್ದೀರಿ, ಅದು ಸರಿಯಿಲ್ಲ ಎಂದು ಹೇಳಿ. ಪ್ರಶ್ನೆ ಏನೆಂದರೆ - Suppose Ranganath has done anything to the Police-Sub-Inspector or the Sub-Inspector has something against him. See there was supposed to be some physical altercation....

ಒಂದು ವೇಳೆ ನಾವು ಇಲ್ಲಿ ನಿಂತುಕೊಂಡು ರಾಜಕೀಯವಾಗಿ....

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ನಾನೆಂದೂ ಈ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಯಾವ ದೇವರ ಮೇಲೆ ಬೇಕಾದರೂ ಸತ್ಯಮಾಡಿ ಹೇಳುತ್ತೇನೆ. ತಮಗೆ ಗೊತ್ತಿದೆ, ನಾನು ಆ ತರಹ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ರಂಗನಾಥ್ ಎನ್ನುವ ಒಬ್ಬ ನಿರಾಪರಾಧಿಯ ಕೈಗೆ ಕೋಳ ಜೋಡಿಸಿ, ಒದ್ದು ಎಲ್ಲಾ ಮಾಡಿದ್ದಾರೆ. ತಮ್ಮಿಂದ ರಕ್ಷಣೆ ಪಡೆಯುವುದಕ್ಕೋಸ್ಕರವಾಗಿ ಇದನ್ನು ನಾನು ಹೇಳುತ್ತಾ ಇರತಕ್ಕಂಥಾದ್ದು. ನೀವು ಸಿ.ಓ.ಡಿ. ಗೆ ಕೊಡುವುದಾದರೆ.....

ಶ್ರೀ ಕೆ.ಎಚ್.ರಂಗನಾಥ್:- ನಾಗರಾಜ್‌ರವರೇ, ಯಾವ ರಂಗನಾಥ್ ಎಂದು ನೀವು ಸರಿಯಾಗಿ ಹೇಳಬೇಕು. ಬರೇ ರಂಗನಾಥ್ ಎಂದರೆ, ಪೇಪರ್‌ನಲ್ಲಿ ಬರೆದುಬಿಡುತ್ತಾರೆ. ಅಮೇಲೆ ನನ್ನ ಗತಿಯೇನಾಗಬೇಕು ಇಲ್ಲಿ?

ಶ್ರೀ ವಾಟಾಳ್ ನಾಗರಾಜ್:- ತಮಗೆ ಗೊತ್ತಿದೆ, ಅ.ತಿ. ರಂಗನಾಥ್ ಅವರು ಕನ್ನಡ ಚಳುವಳಿಯ ಪ್ರಮುಖ ಕಾರ್ಯಕರ್ತರು. ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ತಾವು ಏನು ಸಿ.ಓ.ಡಿ.ಗೆ ವಹಿಸುತ್ತೇವೆ ಎಂದು ಹೇಳುತ್ತಿದ್ದೀರಿ; ಅದರ ಬಗ್ಗೆ ಸತ್ಯಾಸತ್ಯತೆಗಳನ್ನು ತಮಗೆ ಹೇಳುತ್ತೇನೆ.

ಇದು ನಡೆದಿರತಕ್ಕಂಥಾದ್ದು ನೂರಕ್ಕೆ ನೂರರಷ್ಟುಸತ್ಯ. ರಂಗನಾಥ್ ನಿರಪರಾಧಿ. ರಂಗನಾಥ್ ಅವರನ್ನು ಪೋಲೀಸಿನವರು ಉದ್ದೇಶಪೂರ್ವಕವಾಗಿ ಒದಿದ್ದಾರೆ. ಕೈಗೆ ಬಳಿ ಹಾಕಿದ್ದಾರೆ. ನಾನು ಯಾವತ್ತು ಇಂತಹ ವಿಚಾರಗಳಲ್ಲಿ ರಾಜಕೀಯ ಮಾಡುವುದಿಲ್ಲ ಎಂಬುದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ನಾನು ಎಂದೂ ಮಾಡಿಲ್ಲ, ತಾವು ಸಿ.ಓ.ಡಿ ಗೆ ಹಾಕುವಾಗ ಅಸಂಬಂಧಪಟ್ಟಂತಹ ಅಧಿಕಾರಿಯನ್ನು ಸಸ್ಪಂಡ್ ಮಾಡಿ ತನಿಖೆ ಮಾಡಿದರೆ ಒಂದು ನ್ಯಾಯ ದೊರಕುತ್ತದೆ. ತಾವು ಸಿ.ಓ.ಡಿ ಗೆ ಹಾಕಿ ಅವರನ್ನು ಅಲ್ಲೇ ಇಟ್ಟರೆ ಎಲ್ಲಿ ನ್ಯಾಯ ಸಿಗುತ್ತದೆ ಎಂದು ನಾವು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ವೀರಪ್ಪಮೊಯಿಲಿ :- ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. I have clearly said, if I take a political decision,

ಅದು ತಪ್ಪಾಗುತ್ತದೆ ಎಂದು ಅದಕ್ಕೆ ನಾನು ಹೇಳಿದ್ದುದು, ಸಿ.ಓ.ಡಿ ಯ ಉನ್ನತ ಅಧಿಕಾರಿಗಳಿಂದ ಒಂದು ವಾರದ ಒಳಗೆ ನಾನು ವರದಿ ತರಿಸುತ್ತೇನೆ. ಅದರ ಸತ್ಯಾಸತ್ಯತೆಯನ್ನು ನಾವು ಹೇಳಿದ್ದೀರಿ. ಅದನ್ನು ಪರಿಶೀಲನೆ ಮಾಡುತ್ತೇನೆ. ಯಾರನ್ನು ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ವರದಿ ತರಿಸಿ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕೆ ಲೋಕಲ್ ಪೋಲೀಸಿನವರಿಗೆ ಕೊಟ್ಟರೆ ತಾವು ಹೇಳಬಹುದು ಅವರು ಶೀಲ್ಡ್ ಮಾಡುತ್ತಾರೆ ಎಂದು ಸಿ.ಓ.ಡಿ ಯಲ್ಲಿ ಏನು ಇದೆ? when it is supposed to be altercation between the police and the public and if I take a decision and tell them to take action, it may not be proper.

ಅದಕ್ಕೆ ನಾವು ಸಿ. ಓ. ಡಿ.ಗೆ ಕಳುಹಿಸಿದ್ದೇವೆ. ಅದರ ಉನ್ನತ ಅಧಿಕಾರಿಗಳಿಂದ ಕೂಡಲೇ ತನಿಖೆ ಮಾಡಲು ಕಳುಹಿಸಿದ್ದೇವೆ. ಒಂದು ವಾರದ ಒಳಗೆ ವರದಿ ತರಿಸಿ ಅಲ್ಲಿ ಯಾರೇ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಿನಾಥ ಆರ್ ಸಾಂಡ್ರಾ :- (ಮಾನ್ಯ ವಸತಿ ಸಚಿವರು)

ಸಚಿವರ ಹೇಳಿಕೆ

ವಿಧಾನ ಸಭೆಯ ಮಾನ್ಯ ಅಧ್ಯಕ್ಷರವರೆ,

ವಿಧಾನ ಮಂಡಲದ ರೂಲ್ಸ್ ಆಫ್ ಪ್ರೊಸೀಜರ್ ನಿಯಮ 311 ರ ಪ್ರಕಾರ ಮಾನ್ಯ ಶ್ರೀ ಆರ್.ವಿ.ದೇಶಪಾಂಡೆ, ವಿರೋಧ ಪಕ್ಷದ ನಾಯಕರು ನೋಟೀಸೊಂದನ್ನು ಕೊಟ್ಟು ಗೌರವಾನ್ವಿತ ವಿಧಾನ ಸಭೆಯಲ್ಲಿ ನನ್ನ ಮೇಲೆ ಆರೋಪಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೆಲವು ಮೂರು ವರ್ಷಗಳ ಹಿಂದಿನ ಘಟನೆಗಳು ಹಾಗೂ ಉಳಿದವು ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಸಾಲಿಗೆ ಸಂಬಂಧಿಸಿದ್ದವು. ಆರೋಪಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮಾನ್ಯ ಅಧ್ಯಕ್ಷರವರ ಕಛೇರಿಗೆ ಕೊಟ್ಟಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದ್ದರಿಂದ ದಿನಾಂಕ 2.9.1994 ರಂದು ಅವುಗಳನ್ನು [illegible]ಯಲಾಯಿತು. ಆದರೆ ಅವು ಆರೋಪಗಳನ್ನು ಸಮರ್ಥಿಸುವ ದಾಖಲೆಗಳಲ್ಲ. ಇಂಡಸ್ಟ್ರಿಯಲ್ ಸಹಕಾರ ಬ್ಯಾಂಕಿಗೆ ಸಂಬಂಧಿಸಿದ ಯಾವ ಮೂಲ ದಾಖಲೆಗಳನ್ನು ನನಗೆ ಒದಗಿಸಿಲ್ಲ. ಉಳಿದವುಗಳು ಬೆಳಗಾಂ ವಿಭಾಗಾಧಿಕಾರಿಗಳು 'ರಹಸ್ಯ' ವೆಂದು ಕಂದಾಯ ಆಯುಕ್ತರವರಿಗೆ ಬರೆದ ಪತ್ರಗಳು. ಇಷ್ಟೇ ದಾಖಲೆಗಳಿಂದ ಸ್ಪಷ್ಟವಾದ ಉತ್ತರ ಕೊಡುವುದು ಸಾಧ್ಯವಿಲ್ಲ. ಆದಾಗ್ಯೂ ಲಭ್ಯವಿರುವ ದಾಖಲೆಗಳು ಹಾಗೂ ನೆನಪಿನ ಆಧಾರದ ಮೇಲಿಂದ ಈ ಸಭೆಯ ಮುಂದೆ ನಾನು ಆಪಾದನೆಗಳಿಗೆ ಸಂಬಂಧಿಸಿದ ಹಾಗೆ ಉತ್ತರ ಕೊಡಲಿಚ್ಚಿಸಿದ್ದೇನೆ.

ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕ ಭೂ ಸುಧಾರಣಾ ಕಾನೂನನ್ನು ಉಲ್ಲಂಘಿಸಿ ಅಮರಗೋಳ ಗ್ರಾಮದ ಬ್ಲಾಕ್ ಸಂಖ್ಯೆ : 614 ರಲ್ಲಿ 30 ಏಕರೆ 2 ಗುಂಟೆ ಜಮೀನನ್ನು ಖರೀದಿಸಿದ್ದೇನೆ ಎಂದು ಆಪಾದನೆ ಮಾಡಲಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ವಿಭಾಗಾಧಿಕಾರಿಗಳ ದಿನಾಂಕ 16.6.94 ರ ಪತ್ರವನ್ನು ಆಧಾರವಾಗಿಟ್ಟುಕೊಂಡು ಆಪಾದಿಸಿದ್ದಾರೆ. ಆದರೆ ವಿಭಾಗಾಧಿಕಾರಿಗಳು ತಮ್ಮ ವರದಿಯಲ್ಲಿ ನಾನು ಕರ್ನಾಟಕ ಭೂ ಸುಧಾರಣಾ ಕಾನೂನಿನ ಯಾವ ಕಲಂ ಅನ್ನು ಉಲ್ಲಂಘಿಸಿ ಜಮೀನು ಖರೀದಿಸಿದ್ದೇನೆ? ಎಂಬುದನ್ನು ತಿಳಿಸಿಲ್ಲ. ಯಾವ ಯಾವ ಕಾರಣಗಳಿಂದ ಕಾನೂನಿನ ಉಲ್ಲಂಘನೆಯಾಗಿದೆ ಹಾಗೂ ಅದಕ್ಕೆ, ಆಧಾರವಾದ ದಾಖಲೆಗಳೇನು ಎಂಬುದರ ಬಗ್ಗೆ ಸಮರ್ಥನೀಯವಾದ ದಾಖಲೆಗಳನ್ನು ಒದಗಿಸಿಲ್ಲ. ನಾನು ಕರ್ನಾಟಕ ಭೂ ಸುಧಾರಣಾ ಕಾನೂನಿನ ಕಲಂ 80 (1) ರ ಅಡಿಯಲ್ಲಿ ವ್ಯವಸಾಯ ಭೂಮಿಯನ್ನು ಕೊಳ್ಳಲು ಸಂಬಂಧಿಸಿದ ಉಪ ವಿಭಾಗಾಧಿಕಾರಿಯವರಿಗೆ ಅನುಮತಿಗಾಗಿ ದಿನಾಂಕ 10.9.91 ರಂದು ಅರ್ಜಿ ಸಲ್ಲಿಸಿದ್ದೆ. ಉಪ ವಿಭಾಗಾಧಿಕಾರಿಯವರು ಕಲಂ 80 (1)ರ ಅನ್ವಯ ನನ್ನ ಅರ್ಜಿಯನ್ನು ಪರಿಶೀಲಿಸಿ ದಿ : 18.9.91 ರಂದು ಭೂಮಿ ಕೊಳ್ಳಲು ಅನುಮತಿ